# ಚೆಲುವಿನ ಅಟ್ಟ ಬಸದಿ ಬೆಟ್ಟ

ಒಂದು ಕಡೆ ಕಡಿದಾದ ಬಂಡೆ. ಇನ್ನೊಂದೆಡೆ ಕಣ್ತುಂಬುವ ಹಚ್ಚಹಸುರಿನ ವನಸಿರಿ. ಮತ್ತೊಂದೆಡೆ ಮನಸ್ಸಿಗೆ ಮುದ ನೀಡುವ ತಂಪಾದ ನೀರಿನ ಸೆಲೆ. ಸೊಬಗಿನ ತ್ರಿವೇಣಿ ಸಂಗಮದ ಈ ಸುಂದರ ತಾಣವೇ ‘ಬಸದಿ ಬೆಟ್ಟ.’

ಭಾರತದ ಬ್ರಹತ್ ಏಕಶಿಲಾ ಬೆಟ್ಟಗಳಲ್ಲಿ ಒಂದಾದ ಬಸದಿ ಬೆಟ್ಟವನ್ನು ‘ಮಂದರಗಿರಿ ಬೆಟ್ಟ’ ಎಂದೂ ಕರೆಯಲಾಗುತ್ತದೆ. ಸಮುದ್ರ ಮಟ್ಟದಿಂದ ಸುಮಾರು 918 ಅಡಿ ಎತ್ತರದಲ್ಲಿರುವ ಈ ಏಕಶಿಲಾ ಬೆಟ್ಟದ ಮೇಲೆ – ಚಂದ್ರನಾಥ ಪದ್ಮಾಸನ, ಪಾರ್ಶ್ವನಾಥ, ಸುಪಾರ್ಶ್ವನಾಥ ಹಾಗೂ ಚಂದ್ರನಾಥ ಖಡ್ಗಾಸನ ಎಂಬ ಜೈನ ತೀರ್ಥಂಕರರ ನಾಲ್ಕು ಬಸದಿಗಳಿವೆ. ಸುಮಾರು 12 ಅಥವಾ 14ನೇ ಶತಮಾನದಲ್ಲಿ ಈ ಬಸದಿಗಳನ್ನು ನಿರ್ಮಿಸಿದರೆಂದು ಇತಿಹಾಸ ಹೇಳುತ್ತದೆ. ಬೇರೆ ಬಸದಿಗಳಂತೆ ಇಲ್ಲಿರುವ ಬಸದಿಗಳಿಗೆ ಬಾಗಿಲುಗಳಿಲ್ಲ. ಸ್ಥಳಕ್ಕೆ ಬಂದು ತೀರ್ಥಂಕರರ ಸನ್ನಿಧಿಯಲ್ಲಿ ಬೇಡಿಕೊಂಡರೆ ಮನಸ್ಸಿನ ಇಷ್ಟಾರ್ಥಗಳು ಸಿದ್ಧಿಸುತ್ತವೆ ಎನ್ನುವ ನಂಬಿಕೆ ಜನರಲ್ಲಿದೆ.

ಬೆಟ್ಟದ ಮಧ್ಯದಲ್ಲಿ ಬ್ರಹ್ಮ ದೇವರ ಗುಡಿ ಇದ್ದು, ಕುದುರೆಯ ಮೇಲೆ ಕುಳಿತ ಬ್ರಹ್ಮನನ್ನು ನೋಡಬಹುದಾಗಿದೆ. ಅಲ್ಲಿನ ಕಲ್ಲುಹಾಸಿನ ಮೇಲೆ ಬೃಹದಾಕಾರದ ಪಾದದ ಕೆತ್ತನೆ ಇದ್ದು, ಆ ಪಾದವನ್ನು ಭೀಮಪಾದವೆಂದು ಕರೆಯಲಾಗುತ್ತದೆ.

ಬೆಟ್ಟದ ಸನಿಹದಲ್ಲಿಯೇ ನವಿಲಿನ ಆಕಾರದ ಮಂದಿರವಿದೆ. ಆ ಮಂದಿರವನ್ನು ನವಿಲಿನ ಗರಿಗಳ ಬೀಸಣಿಕೆ ಆಕಾರದಲ್ಲಿ ನಿರ್ಮಿಸಲಾಗಿದೆ. ಮಂದಿರವು 81 ಅಡಿಗಳಷ್ಟು ಎತ್ತರವಾಗಿದೆ. ಇದು 1855ರಿಂದ 1955ರವರೆಗೆ ಜೀವಿಸಿದ್ದ 108ನೇ ಗುರುಗಳಾದ ದಿಗಂಬರ ಶ್ರೀ ಶಾಂತಿ ಸಾಗರ ಮಹಾರಾಜ್ ಜಿ ಅವರಿಗೆ ಸಮರ್ಪಿತವಾದ ಗುರುಮಂದಿರ.

ಬೆಟ್ಟದ ಬುಡದಿಂದ ಸುಮಾರು 460 ಮೆಟ್ಟಿಲುಗಳನ್ನು ಹತ್ತಿ ಹೋದರೆ ಜೈನ ಬಸದಿಗಳನ್ನು ಸಂದರ್ಶಿಸಬಹುದು. ಬೆಟ್ಟದ ಮೇಲೆ ನಿಂತು ನೋಡಿದರೆ ತುಮಕೂರಿನ ವಿಹಂಗಮ ನೋಟವನ್ನು ಕಣ್ತುಂಬಿಕೊಳ್ಳಬಹುದು. ಬೆಟ್ಟದ ಮೇಲೆ ಬಿರು ಬೇಸಿಗೆಯಲ್ಲಿಯೂ ಬತ್ತದ ನೀರಿನ ಸಣ್ಣ ಹೊಂಡವಿದೆ. ಇನ್ನೂ ಒಂದೆರಡು ಗುಡ್ಡಗಳನ್ನು ಹತ್ತಿ ಇಳಿದರೆ ಮೈದಾಳದ ಕೆರೆಯ ಸೌಂದರ್ಯವನ್ನು ಕೂಡ ಕಣ್ತುಂಬಿಕೊಳ್ಳಬಹುದು.

ಜೈನರ ತಾಣವಾಗಿದ್ದರೂ ಈ ಕ್ಷೇತ್ರಕ್ಕೆ ಎಲ್ಲಾ ಧರ್ಮದವರು ಭೇಟಿ ನೀಡುತ್ತಾರೆ. ಪ್ರಕೃತಿಯ ಸೌಂದರ್ಯದ ಮುಂದೆ ಎಲ್ಲಾ ಮಾನವರೂ ತಲೆಬಾಗಲೇಬೇಕು ಎಂಬ ಸಂದೇಶವನ್ನು ಬಸದಿ ಬೆಟ್ಟವು ಸಾರಿ ಸಾರಿ ಹೇಳುತ್ತಿರುವಂತಿದೆ.

ಪ್ರತಿಕ್ರಿಯಿಸಿ: feedback@sudha.co.in



ಬೆಟ್ಟದ ಕೆಳಗಿರುವ ಬಾಹುಬಲಿಯ ಮೂರ್ತಿ

**ತುಮಕೂರಿಗೆ ಸಮೀಪದ ಬಸದಿ ಬೆಟ್ಟ ಸರ್ವ ಧರ್ಮೀಯರ ಸೆಳೆವ ತಾಣ. ಒಂದು ದಿನದ ಪ್ರವಾಸಕ್ಕೆ ಅತ್ಯುತ್ತಮ ಸ್ಥಳ.**

**■ ವೀಣಾ ಶಂಕರ್**

### ಬೆಟ್ಟಕ್ಕೆ ಹೋಗುವುದು ಹೇಗೆ?

ಬಸದಿ ಬೆಟ್ಟವು ತುಮಕೂರು ಜಿಲ್ಲೆಯ ಕ್ಯಾತ್ಸಂದ್ರ ಬಳಿಯ ಮಾದಗೊಂಡನಹಳ್ಳಿ ಬಳಿಯಿದೆ. ಬೆಂಗಳೂರಿನಿಂದ 62 ಕಿ.ಮೀ., ತುಮಕೂರಿನಿಂದ 12 ಕಿ.ಮೀ. ದೂರವಿದೆ. ಉತ್ತಮ ರಸ್ತೆ ಹೊಂದಿದೆ. ಬೆಂಗಳೂರಿನಿಂದ ಬಸ್ ಸೌಕರ್ಯವೂ ಇದೆ. ಒಂದು ದಿನದ ಪ್ರವಾಸಕ್ಕೆ ‘ಬಸದಿ ಬೆಟ್ಟ’ದ ಭೇಟಿ ಉತ್ತಮ ಅನುಭವ ನೀಡಬಲ್ಲದು. ಬಸದಿ ಬೆಟ್ಟದಲ್ಲಿ ಉಳಿದುಕೊಳ್ಳಲು ಪ್ರವಾಸಿಗಳಿಗೆ ಅತಿಥಿಗೃಹದ ವ್ಯವಸ್ಥೆಯಿದೆ.

